ಆ) ಯಾವಾಗ ಮಂಜೂರಾತಿ ನೀಡಲಾಗುವುದು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಶಿಗ್ಗಾಂವ್ ಪಟ್ಟಣದಲ್ಲಿ ಬಸ್ ಘಟಕ ನಿರ್ಮಿಸುವ ಯೋಜನೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಮುಂದಿದೆ.

ಆ) ಸದರಿ ಪಟ್ಟಣದಲ್ಲಿ ಬಸ್ ಘಟಕ ನಿರ್ಮಿಸಲು ಸರ್ಕಾರಿ ಜಮೀನು 7 ಎಕರೆ 20 ಗುಂಟೆ ಪಡೆಯಲು ಈಗಾಗಲೇ ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಹಾಗೂ ಜಮೀನನ್ನು ಸಂಸ್ಥೆಯ ವಶಕ್ಕೆ ಪಡೆದ ನಂತರ ಆಂತರಿಕ ಬಂಡವಾಳ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶಿಗ್ಗಾಂವ್ ತಾಲ್ಲೂಕು ಬಂಕಾಪುರ ಪಟ್ಟಣಕ್ಕೆ ಆರಕ್ಷಕ ಠಾಣೆ ಮಂಜೂರಾತಿ

338(635) - ಶ್ರೀ ಖಾದ್ರಿ ಎನ್.ಎಸ್. (ಶಿಗ್ಗಾಂವ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್ ತಾಲ್ಲೂಕು ಬಂಕಾಪುರ ಪಟ್ಟಣಕ್ಕೆ ಆರಕ್ಷಕ ಠಾಣೆ ಮಂಜೂರು ಮಾಡಲು ಸರ್ಕಾರದ ನಿಲುವೇನು?

ಆ) ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ಹಾವೇರಿ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕು ಬಂಕಾಪುರದಲ್ಲಿ ಸದ್ಯಕ್ಕೆ ಒಂದು ಪೊಲೀಸ್ ಠಾಣೆಯನ್ನು ತೆರೆಯುವ ಅಗತ್ಯವಿಲ್ಲವೆಂದು ಭಾವಿಸಲಾಗಿದೆ.

ಸವಣೂರು ಬಸ್ ಘಟಕ ನಿರ್ಮಾಣ

339(636) - ಶ್ರೀ ಖಾದ್ರಿ .ಎಸ್.ಎಸ್. (ಶಿಗ್ಗಾಂವ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರು ಬಸ್ ಘಟಕದ ನಿರ್ಮಾಣದ ಬಗ್ಗೆ ಸರ್ಕಾರದ ಕ್ರಮವೇನು?

ಆ) ಈ ಕಾಮಗಾರಿಗೆ ತಗಲುವ ವೆಚ್ಚ ಎಷ್ಟು?

ಇ) ಬಸ್ ಘಟಕದ ನಿರ್ಮಾಣದ ಕಾಮಗಾರಿ ಯಾವಾಗ ಪ್ರಾರಂಭಿಸಲ್ಪಾಗುವುದು?

ಈ) ಈ ಘಟಕದಿಂದ ಎಷ್ಟು ಬಸ್ಸುಗಳು ಬರುತ್ತಿವೆ?

ಶ್ರೀ ಬಿ. ರಾಮಾನಾಥ್ ರೈ (ಸಾರಿಗೆ ಸಚಿವರು):

ಅ) ಸವಣೂರಿನಲ್ಲಿ ತಾತ್ಕಾಲಿಕ ಬಸ್ ಘಟಕವು ಈಗಾಗಲೇ ಕಾರ್ಯಾಚರಣೆಯಲ್ಲಿದ್ದು, ಇದಕ್ಕೆ ಸಂಬಂಧಿಸಿದ ಖಾಯಂ ಕಟ್ಟಡಗಳನ್ನು ನಿರ್ಮಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಅ) ಸದರಿ ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಯನ್ನು ತಯಾರಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ.

ಇ) ಸಂಸ್ಥೆಯ ಹಣಕಾಸಿನ ಪರಿಸ್ಥಿತಿಯನ್ನಾಧರಿಸಿ, ಅಂದಾಜು ಪಟ್ಟಿ ಮಂಜೂರಾತಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮಗಳನ್ನು ಕೈಗೊಳ್ಳಲಾಗುವುದು.

ಈ) ಹಾಲಿಯಿರುವ ಬಸ್ ಘಟಕದಿಂದ 16 ಅನುಸೂಚಿಗಳು ಕಾರ್ಯಚರಣೆಯಲ್ಲಿರುತ್ತದೆ.

ಶಿಗ್ಗಾಂವ್ ಮತ್ತು ಸವಣೂರು ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು

340(637) - ಶ್ರೀ ಖಾದ್ರಿ ಎಸ್.ಎಸ್ (ಶಿಗ್ಗಾಂವ್): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್ ಮತ್ತು ಸವಣೂರು ಪಟ್ಟಣಕ್ಕೆ ನಾಗನೂರು ಕೆರೆಯಿಂದ ಕುಡಿಯುವ ನೀರು ಸರಬರಾಜು ಯೋಜನೆಯು ಯಾವ ಹಂತದಲ್ಲಿದೆ?

ಆ) ಈ ಯೋಜನೆಗೆ ಇಲ್ಲಿಯವರೆಗೆ ಆದ ಅಂದಾಜು ವೆಚ್ಚ ಎಷ್ಟು?

ಇ) ಈ ಕಾಮಗಾರಿಗೆ ಸಂಪೂರ್ಣ ತಗಲುವ ವೆಚ್ಚ ಎಷ್ಟು?

ಈ) ಈ ಕೆಲಸದ ಕಾಮಗಾರಿ ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಬಂದಿದ್ದರೆ ಇದಕ್ಕೆ ಕಾರಣಗಳೇನು?

ಊ) ಈ ಯೋಜನೆಯಲ್ಲಿ ಬಂಕಾಪುರ ಪಟ್ಟಣ ಸೇರಿದೆಯೋ ಅಥವಾ ಇಲ್ಲವೇ?

ಋ) ಸೇರದಿದ್ದಲ್ಲಿ, ಸೇರಿಸುವ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು)

ಅ) ಶಿಗ್ಗಾಂವ್- ಸವಣೂರು ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯ ಪ್ರಸ್ತುತ ಹಂತ ಈ ಕೆಳಕಂಡಂತಿವೆ:

1. ಶಿಗ್ಗಾಂವ್ ಪಟ್ಟಣದಲ್ಲಿ ನಾಗನೂರು ಕೆರೆಯ ಸಮರ್ಥ್ಯವನ್ನು ಹೆಚ್ಚಿಸುವ ಹಾಗೂ ಕೆರೆಕೋಡಿಯ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.
2. ಜಲಶುದ್ದೀಕರಣಗಾರದ ಕಾಮಗಾರಿ ನಾಗನೂರು ಕೆರೆಯಲ್ಲಿ ಹೌಸಿಂಗ್ ಚೇಂಬರ್ ಹಾಗೂ ಅಪ್ರೋಚ್ ಬ್ರಿಡ್ಜ್ ಕಾಮಗಾರಿಗಳು ಪ್ರಗತಿಯಲ್ಲಿದೆ.
3. 19.32 ಕಿ.ಮೀ. ಉದ್ದದ ಶುದ್ಧ ನೀರಿನ ಗುರುತ್ವಾಕರ್ಷಣೆ ಕೊಳವೆ ಮಾರ್ಗವನ್ನು ನೀರು ಶುದ್ದೀಕರಣಗಾರದಿಂದ ಶಿಗ್ಗಾಂವ್ - ಸವಣೂರು ಪಟ್ಟಣಗಳವರೆಗೆ ಅಳವಡಿಸಲಾಗಿದೆ.